ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.2376/2023

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಸಲ್ಮಾನ್ ಖಾನ್** | | |
| **ತಂದೆ:ಹೆಸರು** | **ಹಸನ್ ಖಾನ್** | **ಪಿಡಬ್ಲೂ:** | **8** |
| **ವಯಸ್ಸು** | **35 ವರ್ಷ** | **ಸಿಡಬ್ಲೂ:** | **7** |
| **ಉದ್ಯೋಗ:** | **ಪಿ ಓ ಪಿ ಕೆಲಸ** | | |
| **ವಾಸ ಸ್ಥಳ:** | **ಸಿಂಧನೂರು.** | | |

**ದಿನಾಂಕ 05-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ::**

ಈ ದಿನ ನ್ಯಾಯಾಲಯದಲ್ಲಿ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಚಾಸಾ-1, 4 ರಿಂದ 6 ಪರಿಚಯ ಇದೆ. 1ನೇ ಆರೋಪಿಯ ಪರಿಚಯ ಇದೆ, 2ನೇ ಆರೋಪಿಯನ್ನು ನೋಡಿದ್ದೇನೆ. ಪೋಲೀಸರು ನನ್ನನ್ನು ವಿಚಾರಿಸಿದ್ದಾರೆ.

ದಿ.17-05-2023 ರಂದು ಬೆ. 9-30 ರ ಸುಮಾರಿಗೆ ಸಿಂಧನೂರಿನ ಇಂದ್ರಾನಗರದಲ್ಲಿ ನಾನು ಕೆಲಸಕ್ಕೆ ಹೊರಟಿದ್ದಾಗ, ಆರೋಪಿತರು ಚಾಸಾ-1 ರವರೊಂದಿಗೆ ಆಸ್ತಿಯ ಸಲುವಾಗಿ ಜಗಳ ಮಾಡುತ್ತಿದ್ದರು. ಆರೋಪಿತರು ಚಾಸಾ-1 & 4 ರವರಿಗೆ ಹೊಡೆ ಬಡೆ ಮಾಡುತ್ತಿದ್ದರು, ನಾನು & ಚಾಸಾ-5 & ಇತರರು ಜಗಳ ಬಿಡಿಸಿಕೊಂಡೆವು. ಆರೋಪಿತರು ಈ ಸರಿ ಉಳಿದುಕೊಂಡಿದ್ದೀರಿ, ಇನ್ನೊಮ್ಮೆ ನಿಮ್ಮನ್ನು ಜೀವಂತ ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿದರು. ಆರೋಪಿತರು ಚಾಕು ಚುಚ್ಚಿದ್ದನು ಸಹ ನಾನು ನೋಡಿದ್ದೇನೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಚಾಕುವನ್ನು ನೋಡಿ ಗುರುತಿಸಿರುವುದಿಲ್ಲ. ಆರೋಪಿತರು ಚಾಕುವನ್ನು ಚಾಸಾ-1 ರವರ ಹೊಟ್ಟೆಗೆ ಚುಚ್ಚಿರುತ್ತಾನೆ.

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈಗ ಹೇಳಿರುವುದನ್ನೇ ನಾನು ಪೋಲೀಸರಿಗೆ ಹೇಳಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ</u>**

ದಿ. 17-5-2023 ರಂದು ಬೆ. 9-30 ಕ್ಕೆ ನಡೆದ ಘಟನೆಯನ್ನು ಮಾತ್ರ ನೀವು ನೋಡಿದ್ದು, ಜಗಳ ಬಿಡಿಸಿಕೊಂಡಿದ್ದಿರಿ, ನಂತರ ಚಾಸಾ-1 ರವರನ್ನು ನಾನು ವಿಚಾರಿಸಿದಾಗ ಅವರು ತಿಳಿಸಿದ್ದೇನೆಂದರೆ ಅದೇ ದಿನ ಬೆ.9-15 ಕ್ಕೆ ಆರೋಪಿತರು ಬಂದು ಆತನಿಗೆ ಲೇ ಸೂಳೆ ಮಗನೆ ನೀನು ಕೊಟ್ಟ ಕೇಸನ್ನು ವಾಪಾಸ್ ತೆಗೆದುಕೋ ಎಂದು ಜಗಳ ತೆಗೆದನು, ಆಗ ಚಾಸಾ-1 ರವರು ಹಿರಿಯರ ಸಮಕ್ಷಮ ಮಾತನಾಡಿ ಎಂದು ಹೇಳಿದಕ್ಕೆ, ಆತನಿಗೆ ಹೊಡೆ ಬಡೆ ಮಾಡಿದ್ದರು, 1 ನೇ ಆರೋಪಿ ಮು. ಮಾ. 1 ರಿಂದ ಚಾಸಾ-1 ತೊಡೆಗೆ ಚುಚ್ಚಿದನು ಎಂದು ತಿಳಿಸಿದ್ದರು ಎಂದರೆ ಸರಿ. ನಂತರ ಜಗಳವನ್ನು ನೀವು & ಚಾಸಾ-5 ರವರು ಬಿಡಿಸಿಕೊಂಡು ಸರ್ಕಾರಿ ಆಸ್ಪತ್ರೆಗೆ ಸೇರಿಸಿದ್ದಿರಿ ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿ.

ಮು. ಮಾ. 1 ರಿಂದಲೇ ಆರೋಪಿತರು ಚುಚ್ಚಿದ್ದರು ಎಂದರೆ ಸರಿ.

**<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ</u>**

1. ಆರೋಪಿತರು ಹೈದ್ರಾಬಾದ್‌ನಲ್ಲಿರುತ್ತಾರೆ ಎಂದರೆ ಸರಿ. ಆರೋಪಿತರಿಗೂ & ದೂರುದಾರರಿಗೂ ನಡುವೆ ಸಿವಿಲ್ ವ್ಯಾಜ್ಯಗಳಿವೆ ಎಂದರೆ ನನಗೆ ಗೊತ್ತಿಲ್ಲ.

2. ಆರೋಪಿತರೇ ಆಸ್ತಿಯ ಕಬ್ಜೆಯಲ್ಲಿದ್ದಾರೆ ಎಂದರೆ ಸರಿ. ಮು. ಮಾ. 1 ರಂತಹ ಚಾಕು ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ.

3. ಈ ಘಟನೆಯನ್ನು ನೀವು ನೋಡಿಲ್ಲ ಆದ್ದರಿಂದ ಘಟನೆಯ ಬಗ್ಗೆ ನಿಮಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದೂರುದಾರರು ನಿಮ್ಮ ಸಂಬಂಧಿಕರಾದ ಕಾರಣ, ಈ ರೀತಿ ಸಾಕ್ಷಿ ಹೇಳಿದರೆ ಅವರಿಗೆ ಅನಕೂಲ ಆಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

4. ನೀವು ಹೇಳಿದಂತೆ ಆರೋಪಿತರು ಹೊಡೆದಿಲ್ಲ, ಬಡೆದಿಲ್ಲ, ಅವಾಚ್ಯವಾಗಿ ಬೈದಿಲ್ಲ, ಜೀವದ ಬೆದರಿಕೆ ಹಾಕಿಲ್ಲ, ಚಾಕುವಿನಿಂದ ಚುಚ್ಚಿಲ್ಲ ಎಂದರೆ ಸರಿಯಲ್ಲ. ದೂರುದಾರರು ನಿಮ್ಮ

ಸಂಬಂಧಿಕರಾದ ಕಾರಣ ಅವರಿಗೆ ಸಹಾಯ ಮಾಡಲುಸುಳ್ಳು ಸಾಕ್ಷಿ ಹೇಳುತ್ತದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**